# ಬೇಲೂರು ಮಠದಲ್ಲಿರುವ ಶ್ರೀರಾಮಕೃಷ್ಣ ದೇವಾಲಯ-೧

ಸ್ವಾಮಿ ವಿಮಲಾತ್ಮಾನಂದ

Sri Ramakrishna Temple at Belur Math ಎಂಬ ಸ್ವಾಮಿ ವಿಮಲಾತ್ಮಾನಂದರ ಇಂಗ್ಲಿಷ್ ಲೇಖನದ ಸಂಗ್ರಹಾನುವಾದವನ್ನು ಮಾಡಿರುವವರು ಮೈಸೂರಿನ ಶ್ರೀ ಕೆ. ಆರ್.ಮೋಹನ್. ಶ್ರೀರಾಮಕೃಷ್ಣರ ಹೆಸರಿನಲ್ಲಿರುವ ಈ ಸಂಸ್ಥೆ ಮತ್ತು ಇದರ ದೇವಾಲಯಗಳ ಹಿನ್ನೆಲೆಯಲ್ಲಿರುವ ವಿಶಾಲ ಮನೋ ಭಾವನೆಯ ಪರಿಚಯವನ್ನು ನೀಡುವುದೇ ಈ ಲೇಖನದ ಉದ್ದೇಶ. ಸ್ವಾಮಿ ವಿವೇಕಾನಂದರ ವಿಶೇಷ ಭಾವನೆಗಳ, ದೂರದೃಷ್ಟಿಯ ಪರಿಚಯವೂ ಇಲ್ಲಿದೆ. ಆಧುನಿಕ ಯುಗದ ಹೊಸತನ್ನು, ಗತಕಾಲದ ವೈಭವವನ್ನು ಪ್ರತಿಬಿಂಬಿಸುವ ಈ ದೇವಾಲಯವು ಸಹಸ್ರಾರು ಜನರಿಗೆ ಸ್ಫೂರ್ತಿಯನ್ನು ನೀಡುತ್ತಿದೆ, ಆಧ್ಯಾತ್ಮಿಕ ಸೆಲೆಯಾಗಿದೆ.

"ಯಾರ ಜನ್ಮ ಹಾಗೂ ಸಾಧನೆಗಳಿಂದ ಬಂಗಾಳವು (ತನ್ಮೂಲಕ ಭಾರತ) ಹಾಗೂ ಬಂಗಾಲಿಗಳು (ಭಾರತೀಯರು) ಪವಿತ್ರರಾದರೋ, ಯಾರು ಪಾಶ್ಚಿಮಾತ್ಯ ಸಂಸ್ಕೃತಿಯ ಆಕರ್ಷಣೆಗಳಿಂದ ಮೋಹಗೊಂಡಿದ್ದ ಭಾರತೀಯರನ್ನು ಸಂರಕ್ಷಿಸಿದರೋ, ಯಾರು ತನ್ನ ಹೆಚ್ಚಿನ ನಿಕಟವರ್ತಿ ಶಿಷ್ಯರನ್ನು ಕೊಲ್ಕತಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಂದ ಆರಿಸಿ ಕೊಂಡರೋ, ಅಂತಹ ಶ್ರೀರಾಮಕೃಷ್ಣರಿಗೆ ಕೊಲ್ಕತಾದ ಆಸುಪಾಸಿನಲ್ಲಿ ಯಾವ ಸ್ಮಾರಕವೂ ಇಲ್ಲ. ಇದಕ್ಕಿಂತ ದೊಡ್ಡ ವಿಷಾದ ಇನ್ನು ಯಾವುದಿದೆ?" ಎಂದು ಸ್ವಾಮಿ ವಿವೇಕಾನಂದರು ವಾರಾಣಸಿಯಲ್ಲಿದ್ದ ತಮ್ಮ ಆಪ್ತ ಮಿತ್ರರಾದ ಶ್ರೀ ಪ್ರಮದದಾಸ ಮಿತ್ರರಿಗೆ ದಿನಾಂಕ ೨೬.೫.೧೮೯೦ರಂದು ಬರೆದ ಪತ್ರದಲ್ಲಿ ತಮ್ಮ ಅಳಲನ್ನು ತೋಡಿಕೊಂಡರು. ೧೮೮೬ರಲ್ಲಿ ಶ್ರೀರಾಮಕೃಷ್ಣರ ಮಹಾಸಮಾಧಿಯಾದ ಮೇಲೆ ಸ್ವಾಮಿಜಿಗೆ ತಮ್ಮ ಪ್ರೀತಿಯ ಗುರುಗಳ ಸ್ಮರಣಾರ್ಥವಾಗಿ ಒಂದು ಮಠ ಹಾಗೂ ದೇವಾಲಯ ಸ್ಥಾಪಿಸಬೇಕೆಂಬ ತೀವ್ರವಾದ ಆಸೆಯಿತ್ತು. ಅದಕ್ಕಾಗಿ ಅವರು ಶ್ರೀ ಪ್ರಮದದಾಸ ಬಾಬುಗಳ ಸಹಾಯ ಯಾಚಿಸಿದರು. ಪ್ರಾರಂಭದಲ್ಲಿ ಶ್ರೀ ಬಲರಾಮ್ ಬಸು ಹಾಗೂ ಸುರೇನ್ ಮಿತ್ರರೆಂಬ ಗೃಹಸ್ಥ ಶಿಷ್ಯರು ಇದಕ್ಕಾಗಿ ಬಹಳ ಸಹಾಯ ಮಾಡಿದರು. ಶ್ರೀ ಸುರೇನ್‌ಬಾಬು ಈ ಮುಂಚೆ ದೇವಾಲಯದ ನಿರ್ಮಾಣಕ್ಕಾಗಿ ಒಂದು ಸಾವಿರ ರೂಪಾಯಿ ವಂತಿಗೆ ಕೊಟ್ಟಿದ್ದು, ಇನ್ನೂ ಹೆಚ್ಚಿನ ಸಹಾಯದ ಭರವಸೆ ಕೊಟ್ಟಿದ್ದರು. ಆದರೆ ದುರದೃಷ್ಟವಶಾತ್ ಇವರಿಬ್ಬರೂ ಬೇಗನೇ ಕಾಲವಾದರು. ಈ ವಿಚಾರವನ್ನು ಸ್ವಾಮಿಜಿ ತಮ್ಮ ಪತ್ರದಲ್ಲಿ ಪ್ರಸ್ತಾಪಿಸಿ ಪ್ರಮದಬಾಬುವಿಗೆ ಈ ರೀತಿ ಬರೆದರು:

'ಗುರುಮಹಾರಾಜರ ಅವಶೇಷಗಳನ್ನು ಈಗ ಎಲ್ಲಿ ಇಡಬೇಕೆಂದು ಯಾರಿಗೂ ಗೊತ್ತಿಲ್ಲ (ನಿಮಗೆ ಗೊತ್ತಿರುವ ಹಾಗೆ ಬಂಗಾಳಿಗಳು ಮಾತಿನಲ್ಲಿ ಧಾರಾಳ. ಆದರೆ ಕಾರ್ಯರೂಪದಲ್ಲಿ ಒಂದಿನಿತೂ ಇಲ್ಲ). ಅವರ ಶಿಷ್ಯರೆಲ್ಲಾ ಸಂನ್ಯಾಸಿಗಳಾಗಿದ್ದು ಎಲ್ಲಿ ಬೇಕಾದರೂ ಹೋಗಲು ತಯಾರಿದ್ದಾರೆ. ಆದರೆ ಭಗವಾನ್ ರಾಮಕೃಷ್ಣರ ಅವಶೇಷಗಳನ್ನು ಸ್ಥಾಪಿಸಲು ಒಂದು ಸಣ್ಣ ಜಾಗವನ್ನೂ ಕೂಡಾ ಪಡೆಯಲು ಸಾಧ್ಯವಾಗಲಿಲ್ಲವೆಂದು ತಿಳಿದು ಬಹಳ ಸಂಕಟಪಡುತ್ತಿದ್ದೇನೆ. ನನ್ನ ಹೃದಯ ಬಿರಿಯುತ್ತಿದೆ. ಕೊಲ್ಕತಾ ನಗರದ ಆಸುಪಾಸಿನಲ್ಲಿ ಒಂದು ಜಾಗವನ್ನು ಖರೀದಿಸಿ, ಅಲ್ಲಿ ಕೇವಲ ಒಂದು ಸಾವಿರ ರೂಪಾಯಿಗಳಿಂದ ಒಂದು ದೇವಾಲಯವನ್ನು ಕಟ್ಟುವುದು ಸಾಧ್ಯವೇ ಇಲ್ಲ. ಬರೀ ಜಾಗಕ್ಕೆ ಆರು ಸಾವಿರದಿಂದ ಹದಿನೇಳು ಸಾವಿರ ರೂಪಾಯಿ ಆಗುತ್ತದೆ. ಶ್ರೀರಾಮಕೃಷ್ಣರ ಶಿಷ್ಯರ ಪೋಷಕರು ಮತ್ತು ಸ್ನೇಹಿತರಾಗಿ ನೀವೊಬ್ಬರೇ ಇದ್ದೀರಿ. ಭಾರತದ ಉತ್ತರ-ಪೂರ್ವ ಪ್ರದೇಶಗಳಲ್ಲಿ ನಿಮಗೆ ಒಳ್ಳೆ ಖ್ಯಾತಿ, ಅಧಿಕಾರ ಮತ್ತು ಪರಿಚಿತರ ವಲಯ ಇದೆ. ಸಾಧ್ಯವಾದರೆ ಹಾಗೂ ನಿಮಗೆ ಸರಿ ತೋರಿದರೆ, ನಿಮಗೆ ಪರಿಚಯವಿರುವ ಶ್ರದ್ಧಾಭಕ್ತಿಗಳುಳ್ಳ ಸ್ಥಿತಿವಂತರಿಂದ ವಂತಿಗೆ ಸಂಗ್ರಹ ಮಾಡಲು ಸಾಧ್ಯವೇ ಎಂದು ವಿನಂತಿಸುತ್ತೇನೆ." ಸ್ವಾಮಿಜಿ ತಮ್ಮ ಪತ್ರಕ್ಕೆ ಬರಬಹುದಾದ ಪ್ರತಿಕ್ರಿಯೆಯನ್ನು ನಿರೀಕ್ಷಿಸಿದ್ದರು. "ನೀನು ಒಬ್ಬ ಸಂನ್ಯಾಸಿ, ನೀನು ಇಂತಹ ಆಸೆಗಳನ್ನು ಇಟ್ಟುಕೊಂಡು ಯಾಕೆ ವೃಥಾ ಶ್ರಮ ಪಡಬೇಕು?" ಎಂಬ ಪ್ರಶ್ನೆಗೂ ಉತ್ತರ ನೀಡಿದ್ದರು. ಅದಕ್ಕೆ ಅವರ ಉತ್ತರ, "ನಾನು ಶ್ರೀರಾಮಕೃಷ್ಣರ ದಾಸ. ಅವರ ಜನ್ಮ ಹಾಗೂ ಸಾಧನ ಕ್ಷೇತ್ರದಲ್ಲಿ ಇರಬೇಕಾದ ಅವರ ಶಾಶ್ವತ ಸ್ಮರಣಾರ್ಥಕ್ಕಾಗಿ ಹಾಗೂ ಅವರ ಶಿಷ್ಯರು ಅಲ್ಲಿ ನೆಲೆಸಿ ಉದಾತ್ತ ಧ್ಯೇಯಗಳನ್ನು ಪಾಲಿಸಲು ನನ್ನಿಂದ ಯತ್ಕಿಂಚಿತ್ ಸಹಾಯವಾಗುವುದಾದರೆ ನಾನು ಕಳವು, ದರೋಡೆಗಳನ್ನೂ ಮಾಡಲು ತಯಾರಿದ್ದೇನೆ. ನಾನು ನಿಮ್ಮ ಸಮೀಪವರ್ತಿಯೆಂದು ತಿಳಿದು, ನನ್ನ ಅಂತರಂಗದ ಅಳಲನ್ನು ತೋಡಿಕೊಂಡಿದ್ದೇನೆ. ಒಂದು ವೇಳೆ ಕಾಶಿಯಲ್ಲಿಯೇ ಸ್ಮಾರಕ ಕಟ್ಟಬಹುದೆಂದು ನೀವು ವಾದ ಮಾಡಿದರೆ, ಶ್ರೀರಾಮಕೃಷ್ಣರ ಜನ್ಮ ಹಾಗೂ ಸಾಧನಾ ಕ್ಷೇತ್ರದಲ್ಲಿ ಅವರ ಸ್ಮಾರಕ ಕಟ್ಟದಿದ್ದರೆ ಅದಕ್ಕಿಂತ ಅತ್ಯಂತ ಶೋಚನೀಯ ಸ್ಥಿತಿ ಇನ್ನೊಂದಿಲ್ಲವೆಂದು ನನ್ನ ಅಭಿಪ್ರಾಯ" ಎಂದು ಪ್ರಮದ ಬಾಬುರವರಿಗೆ ಬರೆದಿದ್ದರು.

ಪತ್ರವನ್ನು ಓದಿ ಪ್ರಮದಬಾಬು ಬೇಕಾದ ಧನಸಂಗ್ರಹಣೆ ಮಾಡಬಹುದೆಂದು ಸ್ವಾಮಿಜಿ ಬಹಳ ಆಸೆ ಇಟ್ಟುಕೊಂಡಿದ್ದರು. ಆದರೆ ಬಾಬುಗಳ ಶೀತಲ ಪ್ರತಿಕ್ರಿಯೆಯಿಂದ ಸ್ವಾಮಿಜಿಯವರಿಗೆ ನಿರಾಸೆ ಆಯಿತು. ಸದ್ಯಕ್ಕೆ ಅವರು ದೇವಾಲಯ

ಕಟ್ಟುವ ಆಸೆಯನ್ನು ಕೈಬಿಟ್ಟರು. ಆದರೆ ಮುಂದೆ ನಡೆದ ಘಟನೆಗಳನ್ನು ನೋಡಿದರೆ ಸ್ವಾಮಿಜಿಯವರ ಮನಸ್ಸಿನಲ್ಲಿ ಸದಾಕಾಲ ಈ ವಿಚಾರ ಬೆಳೆಯುತ್ತಿದ್ದು ಅವರು ಒಂದು ಸೂಕ್ತ ಅವಕಾಶಕ್ಕಾಗಿ ಕಾಯುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.


ಪಾಶ್ಚಾತ್ಯ ದೇಶದಲ್ಲಿದ್ದಾಗ, ಸ್ವಾಮಿಜಿ ಪದೇ ಪದೇ ಅವರ ಗುರುಭಾಯಿಗಳಿಗೆ ಪತ್ರ ಬರೆಯುತ್ತಿದ್ದರು. ವಿಶೇಷವಾಗಿ ಸ್ವಾಮಿಗಳಾದ ಬ್ರಹ್ಮಾನಂದ, ರಾಮಕೃಷ್ಣಾನಂದ ಹಾಗೂ ಅಭೇದಾನಂದರಿಗೆ ಗಂಗಾನದಿಯ ತಟದಲ್ಲಿ ಹಾಗೂ ಕೊಲ್ಕತಾ ಸಮೀಪದಲ್ಲಿ ಒಂದು ಜಾಗವನ್ನು ಪಡೆಯಲು ಕೋರಿದ್ದರು. ಕೊನೆಗೆ ಬೇಲೂರಿನಲ್ಲಿರುವ ಏಳು ಎಕರೆ ಜಮೀನನ್ನು ಪಾಟ್ನಾದ ಶ್ರೀ ಭಗವತ್ ನಾರಾಯಣ್ ಸಿಂಗ್ ಅವರಿಂದ ಖರೀದಿಸಲಾಯಿತು. ಅದರ ಬೆಲೆ ಮೂವತ್ತೊಂಬತ್ತು ಸಾವಿರ ರೂಪಾಯಿ. ಹಣದ ಜವಾಬ್ದಾರಿಯನ್ನು ಸ್ವಾಮಿಜಿಯ ಆಪ್ತ ಶಿಷ್ಯೆ ಕು. ಎಚ್. ಮಿಲ್ಲರ್ ಎಂಬಾಕೆ ವಹಿಸಿಕೊಂಡಳು. ದಿನಾಂಕ ೫.೩.೧೮೯೮ರಂದು ಕ್ರಯಪತ್ರ ಹೌರಾದಲ್ಲಿ ರಿಜಿಸ್ಟರ್ ಆಯಿತು. ಈ ಮುಂಚೆ ವರಾಹನಗರದ ಆಶ್ರಮವನ್ನು ಆಲಂ ಬಜಾರಿಗೆ ೧೮೯೭ರಲ್ಲಿ, ಅನಂತರ ನಿಲಾಂಬರ ಬಾಬು ತೋಟದ ಮನೆಗೆ ಫೆಬ್ರವರಿ, ೧೮೯೮ರಲ್ಲಿ ಸ್ಥಳಾಂತರಿಸ ಲಾಗಿತ್ತು.

ಇನ್ನು ಶ್ರೀರಾಮಕೃಷ್ಣರ ದೇವಾಲಯ ಕಟ್ಟುವ ವಿಚಾರವನ್ನು ಸ್ವಾಮಿಜಿಯವರು ಅಖಂಡಾನಂದ ಮತ್ತು ವಿಜ್ಞಾನಾ ನಂದರೊಂದಿಗೆ ಚರ್ಚಿಸಿದರು. ತಮ್ಮ ಪೂರ್ವಾಶ್ರಮದಲ್ಲಿ ವಿಜ್ಞಾನಾನಂದರು ಸ್ವತಃ ಇಂಜಿನಿಯರಿಂಗ್ ಪದವೀಧರರು. ಸ್ವಾಮಿಜಿಯವರು ಭಾರತ ಮತ್ತು ವಿದೇಶ ಸಂಚಾರಗಳಲ್ಲಿ ವಿವಿಧ ದೇವಾಲಯಗಳನ್ನೂ, ಮಸೀದಿಗಳನ್ನೂ, ಚರ್ಚುಗಳನ್ನೂ, ಅರಮನೆಗಳನ್ನೂ, ವಾಸ್ತು ಹಾಗೂ ಚಿತ್ರಶಾಲೆಗಳನ್ನೂ ಸಂದರ್ಶಿಸಿ, ವಾಸ್ತುಶಿಲ್ಪದ ಬಗ್ಗೆ ಆಳ ವಾದ ಜ್ಞಾನವನ್ನು ಪಡೆದಿದ್ದರು. ಅಲ್ಲದೆ ಅವರಲ್ಲಿದ್ದ ಸ್ವಾಭಾವಿಕವಾದ ಕಲಾಪ್ರತಿಭೆ ಯಿಂದ ಸ್ವಾಮಿಜಿಯವರು ತಮ್ಮ ವಿಚಾರಗಳನ್ನು ವಿಜ್ಞಾನಾನಂದರಿಗೆ ತಿಳಿಸಿ ದೇವಾಲಯಕ್ಕಾಗಿ ಒಂದು ನಕ್ಷೆ ತಯಾರು ಮಾಡಲು ಹೇಳಿದರು. ಯಾವ ಜಾಗದಲ್ಲಿ ದೇವಾಲಯ ಕಟ್ಟ ಬೇಕೆಂದು ಗುರುತಿಸಿಕೊಟ್ಟರು. ಹಲ ವಾರು ನಕ್ಷೆಗಳನ್ನು ವಿಜ್ಞಾನಾನಂದರು ತಯಾರುಮಾಡಿದ ಮೇಲೆ ಸ್ವಾಮಿಜಿಯವರ ಒಪ್ಪಿಗೆ ಸಿಕ್ಕಿತು. "ಈ ದೇವಾಲಯ ಪೂರ್ತಿಯಾಗಿ ನಿರ್ಮಾಣವಾಗುವ ತನಕ ನಾನು ಬದುಕಿರುವುದಿಲ್ಲ. ಆದರೆ ಅದನ್ನು ನಾನು ಮೇಲಿ ನಿಂದ ನೋಡುತ್ತೇನೆ" ಎಂದು ತಿಳಿಸಿದರು.

ಆಗಿನ ಖ್ಯಾತ ಚಿತ್ರಕಾರ ಹಾಗೂ ಜೂಬಿಲಿ ಆರ್ಟ್ ಅಕಾಡೆಮಿಯ ಪ್ರಾಂಶುಪಾಲರಾದ ಶ್ರೀ ರಣದ ಪ್ರಸಾದ್ ದಾಸಗುಪ್ತರು ಸ್ವಾಮಿಜಿಯನ್ನು ಭೇಟಿಮಾಡಲು ಬೇಲೂರು ಮಠಕ್ಕೆ ಬಂದಿದ್ದರು. ಸ್ವಾಮಿಜಿ ಅವರಿಗೆ ದೇವಾಲಯದ ನಕ್ಷೆಯನ್ನು ತೋರಿಸಿ, ತಮ್ಮ ವಿಚಾರಗಳನ್ನು ತಿಳಿಸಿದರು. ಇದನ್ನು ಸ್ವಾಮಿಜಿಯವರ ಶಿಷ್ಯರಾದ ಶರತ್‌ಚಂದ್ರ ಚಕ್ರವರ್ತಿ ತಮ್ಮ ದಿನಚರಿಯಲ್ಲಿ ಈ ರೀತಿ ದಾಖಲಿಸಿದ್ದಾರೆ:

"ಮುಂದೆ ಕಟ್ಟುವ ಆಶ್ರಮ ಹಾಗೂ ದೇವಾಲಯಗಳಲ್ಲಿ ಪೂರ್ವ ಹಾಗೂ ಪಾಶ್ಚಿಮಾತ್ಯ ಕಲೆಗಳ ಎಲ್ಲ ಉತ್ತಮ ವಿನ್ಯಾಸಗಳೂ ಒಂದಾಗಬೇಕೆಂದು ಬಯಸುತ್ತೇನೆ. ನನ್ನ ವಿಶ್ವ ಪರ್ಯಟನದಲ್ಲಿ ಸಂಗ್ರಹಿಸಿದ ವಾಸ್ತುಜ್ಞಾನವನ್ನು ಈ ನಿರ್ಮಾಣದಲ್ಲಿ ತೊಡಗಿಸಬೇಕೆಂಬ ಹಂಬಲ ನನ್ನದು. ಒತ್ತೊತ್ತಾಗಿ ಇರುವ ಕಲಾತ್ಮಕ ಸ್ತಂಭಗಳ ಆಧಾರದ ಮೇಲೆ ಒಂದು ದೊಡ್ಡ ಛಾವಣಿಯುಳ್ಳ ಭವ್ಯ ಪ್ರಾರ್ಥನಾ ಮಂದಿರ ಕಟ್ಟಲ್ಪಡುತ್ತದೆ. ಗೋಡೆಗಳಲ್ಲಿ ನೂರಾರು ಅರಳಿದ ಕಮಲ ಪುಷ್ಪಗಳ ವಿನ್ಯಾಸವಿರುತ್ತದೆ. ಸುಮಾರು ಸಾವಿರ ಜನರು ಇಲ್ಲಿ ಕುಳಿತು ಧ್ಯಾನ ಮಾಡುವಂತಿರಬೇಕು. ಶ್ರೀರಾಮಕೃಷ್ಣರ ದೇವಾಲಯ ಹಾಗೂ ಪ್ರಾರ್ಥನಾ ಮಂದಿರವನ್ನು ದೂರದಿಂದ ನೋಡು ವಾಗ 'ಓಂ'ಕಾರದ ವಿನ್ಯಾಸ ಕಾಣುವ ಹಾಗೆ ನಿರ್ಮಾಣ ಮಾಡಬೇಕು. ದೇವಾಲಯದ ಒಳಗೆ ಹಂಸಾಸನಸ್ಥಿತ ಶ್ರೀರಾಮಕೃಷ್ಣರ ವಿಗ್ರಹವಿರುತ್ತದೆ. ಉಭಯ ಪಾರ್ಶ್ವ ದ್ವಾರಗಳಲ್ಲಿ ಸಿಂಹ ಮತ್ತು ಕುರಿ ಪರಸ್ಪರ ಪ್ರೀತಿಸುವ ವಿಗ್ರಹ ಗಳು ಇದ್ದು ಪ್ರೀತಿಯಲ್ಲಿ ಮಹಾನ್ ಶಕ್ತಿ ಹಾಗೂ ಮಾರ್ದವತೆ ಒಂದಾಗು ವುದನ್ನು ಸಾಂಕೇತಿಕವಾಗಿ ತೋರಿಸ ಬೇಕು. ಒಂದು ವೇಳೆ ನಾನು ಸಾಕಷ್ಟು ಕಾಲ ಬದುಕಿದ್ದರೆ ಇವುಗಳನ್ನು ಕಾರ್ಯಗತ ಮಾಡುತ್ತೇನೆ. ಇಲ್ಲದಿದ್ದರೆ ಮುಂದಿನ ಪೀಳಿಗೆಯವರು ಇದನ್ನು ಹಂತ ಹಂತ ವಾಗಿ ನಿರ್ಮಾಣ ಮಾಡಬಹುದು."

ಇತರ ಭಾರತೀಯ ದೇವಾಲಯ ಗಳಲ್ಲಿರದ ಕೆಲವು ವಿಶೇಷಗಳು



ಶ್ರೀರಾಮಕೃಷ್ಣರ ದೇವಾಲಯದ ನಕ್ಷೆ



ಬೇಲೂರು ಮಠದಲ್ಲಿರುವ ಶ್ರೀರಾಮಕೃಷ್ಣರ ದೇವಾಲಯದ ನವರಂಗ ಮಂಟಪದ ಭವ್ಯನೋಟ

ಶ್ರೀರಾಮಕೃಷ್ಣರ ದೇವಾಲಯದಲ್ಲಿ ಇರುವುದು ವಿಜ್ಞಾನಾನಂದರ ನಕ್ಷೆಗಳಿಂದ ಹಾಗೂ ಸ್ವಾಮಿಜಿಯ ಬರಹಗಳಿಂದ ತಿಳಿದುಬರುತ್ತದೆ. ಹಿಂದೂ ದೇವಾಲಯಗಳಲ್ಲಿ ಗರ್ಭಗುಡಿ ಮತ್ತು ನವರಂಗ (ಪ್ರಾರ್ಥನಾ ಮಂದಿರ) ಪ್ರತ್ಯೇಕವಾಗಿ ಇರುತ್ತವೆ. ಆದರೆ ಸ್ವಾಮಿಜಿಯವರ ನಕ್ಷೆಯಲ್ಲಿ ಅವೆರಡೂ ಒಂದಾಗಿ ಸೇರಿಕೊಂಡಿವೆ. "ಗರ್ಭಗುಡಿಯ ಮೂರು ದಿಕ್ಕುಗಳಲ್ಲಿ ಹಲವಾರು ಬಾಗಿಲುಗಳಿದ್ದು, ಎಲ್ಲಿಂದ ಬೇಕಾದರೂ ಭಗವಂತನ ದರ್ಶನವನ್ನು ಮಾಡಬಹುದು. ಪ್ರಾರ್ಥನಾ ಮಂದಿರದ ಬಾಗಿಲು ಮತ್ತು ಕಿಟಕಿಗಳು ಚರ್ಚ್ ಮಾದರಿಯಲ್ಲಿ ಇರುತ್ತವೆ. ಪುರಾತನ ದೇವಾಲಯಗಳಲ್ಲಿ ಹೀಗೆ ಇರುವುದಿಲ್ಲ. ಎರಡನೆಯದಾಗಿ ಗರ್ಭಗುಡಿಯ ಛಾವಣಿ ಗೋಲಾಕಾರವಾಗಿರುತ್ತದೆ. ಇದರಿಂದ ಅಲ್ಲಿ ಗಾಳಿ, ಬೆಳಕು ಧಾರಾಳವಾಗಿ ಬರುತ್ತದೆ. ಪುರಾತನ ಮಂದಿರಗಳಲ್ಲಿ ಗರ್ಭಗುಡಿ ಬಹಳ ಇಕ್ಕಟ್ಟಾಗಿದ್ದು ಅಲ್ಲಿ ಗಾಳಿ ಬೆಳಕು ಕಡಮೆ ಇರುತ್ತವೆ. ಮೂರನೆಯದಾಗಿ ನವರಂಗದಲ್ಲಿ ಹಲವಾರು ಕಂಬಗಳು ಒತ್ತಾಗಿದ್ದು ಏಕಕಾಲಕ್ಕೆ ಸಾವಿರ ಭಕ್ತರು ಕುಳಿತುಕೊಳ್ಳಬಹುದು. ಗೋಡೆಗಳಲ್ಲಿರುವ ಗೂಡುಗಳಲ್ಲಿ ಅವತಾರ ಹಾಗೂ ಮಹಾಪುರುಷರ ಚಿತ್ರಪಟಗಳನ್ನು ಇಡಬೇಕು. ಚೆನ್ನಾಗಿ ಅರಳಿದ ಸಾವಿರ ಕಮಲಗಳುಳ್ಳ ಎತ್ತರದ ಪೀಠದ ಮೇಲೆ ಅಮೃತಶಿಲೆಯಿಂದ ಮಾಡಿದ ರಾಮಕೃಷ್ಣರ ವಿಗ್ರಹವನ್ನು ಪ್ರತಿಷ್ಠಾಪನೆ ಮಾಡಬೇಕು. ದೂರದಿಂದಲೂ ವಿಗ್ರಹ ಚೆನ್ನಾಗಿ ಕಾಣಬೇಕು. ಹಂಸ ಕಮಲಪೀಠವನ್ನು ಹೊತ್ತಂತೆ ಇರಬೇಕು. ಐದನೆಯದಾಗಿ ಚೆನ್ನಾಗಿ ಹೊಳೆಯುವ ರತ್ನಖಚಿತ 'ಓಂಕಾರ'ವನ್ನು ಮೇಲಿನ ಆವರಣದಲ್ಲಿ ಅಳವಡಿಸಬೇಕು. ಕೊನೆಯದಾಗಿ ಪಾಶ್ಚಾತ್ಯ ಹಾಗೂ ಭಾರತೀಯ ಶೈಲಿಯ ವಾಸ್ತು ವಿನ್ಯಾಸಗಳಿರಬೇಕು."

ಜುಲೈ ೧೯೦೨ರಲ್ಲಿ ಸ್ವಾಮಿಜಿ ಮಹಾಸಮಾಧಿ ಹೊಂದಿದರು. ರಾಮಕೃಷ್ಣ ಸಂಘದ ಪ್ರಥಮ ಅಧ್ಯಕ್ಷರಾದ ಸ್ವಾಮಿ ಬ್ರಹ್ಮಾನಂದರು ದೇವಾಲಯದ ನಿರ್ಮಾಣ ಪ್ರಯತ್ನವನ್ನು ಮಾಡಿದರೂ ನಾನಾ ಕಾರಣಗಳಿಂದ ಅದನ್ನು ಪೂರ್ಣಗೊಳಿಸಲು ಅವರಿಗೆ ಸಾಧ್ಯವಾಗಲಿಲ್ಲ. ದೇವಾಲಯದ ನಿರ್ಮಾಣದಲ್ಲಿ ಸ್ವಾಮಿಜಿಯವರ ಆಶಯವನ್ನು ಸಾಕಾರಗೊಳಿಸುವ ಜವಾಬ್ದಾರಿಯ ಬಗ್ಗೆ ಅವರು ಬೇಲೂರು ಮಠದ ಸಂನ್ಯಾಸಿಗಳಿಗೆ, ತಾವು ೧೯೨೧ರಲ್ಲಿ ಸಮಾಧಿಸ್ಥರಾಗುವ ಮುಂಚೆ, ಜ್ಞಾಪಿಸಿದರು.

ಅನಂತರ ಏಳು ವರ್ಷ ಕಳೆಯಿತು. ಶ್ರೀರಾಮಕೃಷ್ಣರ ನೇರ ಶಿಷ್ಯರು ಒಬ್ಬೊಬ್ಬರಾಗಿ ನಿಧನ ಹೊಂದುತ್ತಿದ್ದರು. ಕೊನೆಯ ಪಕ್ಷ ದೇವಾಲಯದ ಅಸ್ತಿಭಾರವನ್ನಾದರೂ ಕೂಡಲೇ ಹಾಕಬೇಕೆಂದು ನಿಶ್ಚಯಿಸಲಾಯಿತು. ಶ್ರೀರಾಮಕೃಷ್ಣರ ಜನ್ಮದಿನದಂದು ಅಂದರೆ ದಿನಾಂಕ ೧೩.೩.೧೯೨೯ರಂದು ಶ್ರೀರಾಮಕೃಷ್ಣರ ನೇರಶಿಷ್ಯರಾದ ಸ್ವಾಮಿ ಅಭೇದಾನಂದ, ಸ್ವಾಮಿ ವಿಜ್ಞಾನಾನಂದ, ಮಾಸ್ಟರ್ ಮಹಾಶಯ ಮತ್ತು ಅನೇಕ



ಶ್ರೀರಾಮಕೃಷ್ಣರ ದೇವಾಲಯದ ಮುಂಭಾಗದ ದೃಶ್ಯ

ಸಂನ್ಯಾಸಿಗಳ, ಬ್ರಹ್ಮಚಾರಿಗಳ ಮತ್ತು ಭಕ್ತರ ಉಪಸ್ಥಿತಿಯಲ್ಲಿ ಆಗಿನ ಸಂಘದ ಎರಡನೆ ಅಧ್ಯಕ್ಷರಾದ ಶ್ರೀಮತ್ ಸ್ವಾಮಿ ಶಿವಾನಂದರು (ಮಹಾಪುರುಷ್ ಮಹರಾಜ್) ಇದಕ್ಕೆ ಅಸ್ತಿಭಾರವನ್ನು ಹಾಕಿದರು. ಇಂಗ್ಲಿಷ್, ಬಂಗಾಳಿ ಹಾಗೂ ಸಂಸ್ಕೃತ ಶಾಸನಗಳಿರುವ ತಾಮ್ರಪತ್ರಗಳನ್ನು ಒಂದು ಕಲ್ಲಿನ ಪೆಟ್ಟಿಗೆಯಲ್ಲಿಟ್ಟು ಅಸ್ತಿಭಾರದಲ್ಲಿ ಹೂತರು. ಆ ಕಲ್ಲಿನ ಪೆಟ್ಟಿಗೆಯಲ್ಲಿ ಮಾರ್ಚ್ ೧೩, ೧೯೨೯ ಮುಂತಾದ ಮಾಹಿತಿಗಳನ್ನು ಬರೆದ ಇನ್ನೊಂದು ತಾಮ್ರಪತ್ರ, ಐದು ವಿಧವಾದ ನಾಣ್ಯಗಳು ಮತ್ತು ೧೯೨೯ರಲ್ಲಿ ಛಾಪಿಸಿದ ಒಂದು ರೂಪಾಯಿ ನಾಣ್ಯವನ್ನು ಸಹಾ ಇಡಲಾಗಿತ್ತು

ಸಾರಗಾಛಿ ಆಶ್ರಮದಲ್ಲಿದ್ದ ಶ್ರೀರಾಮಕೃಷ್ಣರ ನೇರಶಿಷ್ಯರಾದ ಸ್ವಾಮಿ ಅಖಂಡಾನಂದರು ಒಂದು ಪತ್ರ ಬರೆದು ತಮಗೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನಾನುಕೂಲವಿರುವುದಕ್ಕೆ ವಿಷಾದ ವ್ಯಕ್ತಪಡಿಸಿ, ಸ್ವಾಮಿಜಿಯವರ ಇಚ್ಛೆ ಸಾಕಾರವಾಗಲು ಗುರುಮಹಾರಾಜ್‌ರಲ್ಲಿ ಪ್ರಾರ್ಥನೆ ಮಾಡಿರುವುದಾಗಿ ತಿಳಿಸಿದರು. ಈ ದೇವಾಲಯ ನಿರ್ಮಾಣ ಮಾಡಲು ಸ್ವಾಮಿಜಿಯ ವಿಚಾರಗಳೇ ಮೂಲ ಕಾರಣವೆಂದು ಎಲ್ಲರಿಗೂ ತಿಳಿಯಪಡಿಸಿದರು. "ಸಂಕುಚಿತ ಮನೋಭಾವನೆಯನ್ನು ತೊರೆದು ಸ್ವಾಮಿಜಿಯ ಪವಿತ್ರ ವಿಚಾರಗಳಿಂದ ಒಗ್ಗೂಡಿ ಕಾರ್ಯೋನ್ಮುಖರಾದರೆ ನಾವು ಈ ದೇವಾಲಯದಲ್ಲಿರಲು ಯೋಗ್ಯರಾಗುತ್ತೇವೆ. ನವರತ್ನಗಳಿಂದ ಮಾಡಿದ ಓಂಕಾರಕ್ಕಿಂತ ನಮ್ಮ ಸಂಘ ತ್ಯಾಗ, ಶ್ರದ್ಧೆ, ತಾಳ್ಮೆ, ಸಹಿಷ್ಣುತೆ ಮತ್ತು ಪ್ರೀತಿಗಳ ಆದರ್ಶಗಳಿಂದ ಬೆಳಗಬೇಕು" ಎಂದು ಕೂಡ ಬರೆದಿದ್ದರು.

ಆರ್ಥಿಕ ಅಡಚಣೆಯ ಕಾರಣ, ಅಸ್ತಿಭಾರ ಹಾಕಿದ ನಂತರ ಮತ್ತೆ ಐದು ವರುಷ ಈ ಕೆಲಸ ಸ್ಥಗಿತಗೊಂಡಿತು. ೧೯೩೪ರ ಪ್ರಾರಂಭದಲ್ಲಿ ಅಮೆರಿಕದಲ್ಲಿರುವ ಪ್ರಾವಿಡೆನ್ಸ್‌ನ ವೇದಾಂತ ಸೊಸೈಟಿಯ ಅಧ್ಯಕ್ಷರಾದ ಸ್ವಾಮಿ ಅಖಿಲಾನಂದರಿಂದ ಒಂದು ಮಹತ್ತಾದ ಕೊಡುಗೆ ಬಂದಿತು. ವೇದಾಂತದ ನಿಷ್ಠಾವಂತ ವಿದ್ಯಾರ್ಥಿನಿಯರಾದ ಕು. ಹೆಲನ್ ರೂಬೆಲ್ (ಭಕ್ತಿ), ಶ್ರೀಮತಿ ಅನ್ನಾ ವೊರ್‌ಸೆಸ್ಟರ್ (ಅನ್ನಪೂರ್ಣಾ) ದೇವಾಲಯದ ನಿರ್ಮಾಣದ ಖರ್ಚಿನ ಹೆಚ್ಚುಭಾಗವನ್ನು ಭರಿಸಲು ಸ್ವಸಂತೋಷದಿಂದ ಮುಂದೆ ಬಂದರು. ಈ ಕೊಡುಗೆಯನ್ನು ಮಠದವರು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಿದರು. ಭಕ್ತಿ ಮತ್ತು ಅನ್ನಪೂರ್ಣಾ ಅವರುಗಳ ಜತೆಯಲ್ಲಿ ಸ್ವಾಮಿ ಅಖಿಲಾನಂದರು ಬೇಲೂರು ಮಠಕ್ಕೆ ಬಂದು ಎಲ್ಲ ವಿಷಯಗಳನ್ನು ಚರ್ಚಿಸಿ ಇತ್ಯರ್ಥವಾದ ಮೇಲೆ, ಅಕ್ಟೋಬರ್ ೧೯೩೪ರಲ್ಲಿ ಅವರು ಅಮೆರಿಕಾಕ್ಕೆ ವಾಪಸ್ಸಾದರು.

ಸದ್ಯದಲ್ಲೆ ಶ್ರೀರಾಮಕೃಷ್ಣರ ಜನ್ಮಶತಮಾನೋತ್ಸವ ಬರುವುದಿತ್ತು. ಎಲ್ಲರೂ ಹೊಸ ದೇವಾಲಯವು ಶೀಘ್ರದಲ್ಲಿಯೇ ನಿರ್ಮಾಣವಾಗುವುದೆಂದು ಕಾತರದಿಂದ ಎದುರು ನೋಡುತ್ತಿದ್ದರು. ನಿರ್ಮಾಣದ ಸಂಪೂರ್ಣ ಜವಾಬ್ದಾರಿಯು ಸ್ವಾಮಿ ವಿಜ್ಞಾನಾನಂದರ ಹೆಗಲ ಮೇಲೆ ಬಿತ್ತು. ಕೊಲ್ಕತಾದಲ್ಲಿದ್ದ ಮಾರ್ಟಿನ್ ಬರ್ನ್ ಕಂಪನಿಯವರಿಗೆ ನಿರ್ಮಾಣದ ಕೆಲಸವನ್ನು ವಹಿಸಲಾಯಿತು. ಕಂಪನಿಯ ವಾಸ್ತುಶಿಲ್ಪಿಯ ಜತೆಗೆ ಸ್ವಾಮಿ ವಿಜ್ಞಾನಾನಂದರು ಸ್ವಾಮಿಜಿಯವರ ಆಲೋಚನೆಯ ಪ್ರಕಾರ ದೇವಾಲಯದ ನಕ್ಷೆಯ ಬಗ್ಗೆ ಮಾತನಾಡಿದರು. ಮಠದವರ ಮುಂದೆ ಎರಡು ನಕ್ಷೆಗಳನ್ನು ಇಡಲಾಯಿತು. ಒಂದು ನಕ್ಷೆ, ಕಂಪನಿಯ ವಾಸ್ತುಶಿಲ್ಪಿ ಮಿ॥ ಬ್ರೌನ್ ಸ್ವತಃ ರಚಿಸಿದ್ದು. ಇನ್ನೊಂದು ಕಂಪನಿಯ ಇಂಜಿನಿಯರ್ ಹಾಗೂ ನಕ್ಷೆಗಾರರಾದ ಶ್ರೀ ಗೋಪೇಂದ್ರ ಕೃಷ್ಣ ಸರಕಾರ್ ಮತ್ತು ಸುಶೀಲ್ ಬಾಬು ತಯಾರಿಸಿದ ದೇಶೀಯ ನಕ್ಷೆ. ಭಾರತೀಯ ಕಲೆಗೆ ಪ್ರಾಧಾನ್ಯತೆ ನೀಡಿದ್ದ ಎರಡನೆಯದನ್ನೇ ಮಠದವರು ಆಯ್ಕೆ ಮಾಡಿದರು. ಸುಮಾರು ಆರು ಲಕ್ಷ ರೂಪಾಯಿ ಅಂದಾಜುಪತ್ರವನ್ನು ಕಂಪನಿಯವರು ಕೊಟ್ಟರು. ಚುನಾರ್ ಕಲ್ಲಿನಿಂದ ಮುಖ್ಯ ಕಟ್ಟಡವನ್ನು, ಸಾಮಾನ್ಯ ಇಟ್ಟಿಗೆ ಮತ್ತು ಮರಳಿನಿಂದ ನವರಂಗವನ್ನು ಕಟ್ಟುವುದೆಂದು ಇತ್ಯರ್ಥವಾಯಿತು. ಹೀಗೆ ಸುಮಾರು ೩೦ ವರ್ಷಗಳ ನಂತರ ಸ್ವಾಮಿಜಿಯವರ ಕನಸನ್ನು ನನಸಾಗಿ ಮಾಡಲು ಸಾಧ್ಯವಾಯಿತು. (ಮುಂದುವರಿಯುವುದು)